ಸುಮಿ ಹೈಸ್ಕೂಲಿಗೆ ಬರುತ್ತಿದ್ದಂತೆ ಶೈಲತ್ತೆ ಗೆಳತಿಯಂತೆ ಆಗಿದ್ದಳು. ಮಾತು–ಕತೆಗೆ ಕೂತಾಗ, ವಿಷಯ ಬಂದರೆ ಪ್ರೇಮದ ಬಗ್ಗೆ ದಿವ್ಯ ಅನಿಸುವ ಸಾಲುಗಳನ್ನು ಕೋಟ್ ಮಾಡುತ್ತಿದ್ದಳು. ಪ್ರೇಮ–ವಿರಹ, ಒಲವು–ಉನ್ಮಾದದ ಭಾವಗಳಿರುವ ಸುಂದರವಾದ ಪದ್ಯಗಳನ್ನು, ಗಜಲ್ಲುಗಳನ್ನು ಭಾವಪೂರ್ಣವಾಗಿ ಓದಿ ಹೇಳುತ್ತಿದ್ದಳು.

ಕಾರವಾರಕ್ಕೆ ಬಂದ ಮೇಲೆ ಸುಮಿಗೆ ಶೈಲತ್ತೆಯ ಬಗ್ಗೆ ಎದೆಯಲ್ಲಿ ಇನ್ನಷ್ಟು ಆರ್ದ್ರಭಾವ ಜಿನುಗತೊಡಗಿತ್ತು. ನೂರಾರು ಮೈಲಿ ದೂರದಿಂದಲೇ ಅವಳು ಹೆಚ್ಚೆಚ್ಚು ಆಪ್ತವಾಗತೊಡಗಿದಳು. ಪ್ರೀತಿ ಫಲಿಸದಿದ್ದರೂ ಬದುಕಿನಲ್ಲಿ ಹತಾಶಳಾಗದೇ, ಹುಚ್ಚಿಯಾಗದೇ ಕೂದಲೆಳೆಯಲ್ಲಿ ತನ್ನನ್ನು ಬಚಾವ್ ಆಗಿಸಿಕೊಂಡ ಶೈಲತ್ತೆ ಬಗ್ಗೆ ಯೋಚಿಸುವಳು. ಪ್ರೇಮದ ಬಗ್ಗೆ ನಕಾರಾತ್ಮಕವಾಗದೇ, ಪ್ರೇಮಭಾವವನ್ನು ಸದಾ ಫ್ರೆಶ್ ಆಗಿ ಪೊರೆದಿಟ್ಟುಕೊಂಡ ರೀತಿಗೆ ಅಚ್ಚರಿಪಡುವಳು. ವಿಷಾದದ ಅಂಚಿನಿಂದ ಪ್ರೇಮವನ್ನೂ ಬದುಕನ್ನೂ ಲೌಕಿಕವನ್ನು ಮೀರಿ ಅಧ್ಯಾತ್ಮದ ನೆಲೆಗೆ ಎತ್ತರಿಸಿಕೊಂಡ ಶೈಲತ್ತೆಯ ಬಗ್ಗೆ ಪ್ರೀತಿ ಅಭಿಮಾನವಿದ್ದರೂ, ಕಡಲತೀರಕ್ಕೆ ಬಂದ ಮೇಲೇ ತಾನು ಅವಳನ್ನು ಹೀಗೆಲ್ಲ ಅರ್ಥಮಾಡಿಕೊಳ್ಳುತ್ತಿರುವೆ ಅನಿಸುತ್ತಿತ್ತು ಸುಮಿಗೆ. ಅಪ್ಪಟ ಪ್ರೇಮವನ್ನು ಹಿಚುಕಿದ ದುರಹಂಕಾರದ ಅಪ್ಪ ಮತ್ತು ಅವನ ಪಾಳೆಗಾರಿಕೆಯ ಕುಟುಂಬಕ್ಕೆ ಶೈಲತ್ತೆಯ ಬದಲಾದ ವ್ಯಕ್ತಿತ್ವ ಪ್ರತಿಭಟನೆಯ ರೀತಿಯಾಗಿರಬಹುದೇ? ಇಲ್ಲ, ಅದನ್ನು ಪ್ರತಿಭಟನೆ ಎನ್ನುವುದು ಸರಳ ಗ್ರಹಿಕೆಯಾಯಿತು. ಪ್ರತಿಭಟನೆಯನ್ನು ಮೀರಿದ ಸ್ವರೂಪವದು. ಏನದು? ತನಗೆ ಆ ಭಾವವನ್ನು ಮಾತಿನಲ್ಲಿ ಶಬ್ದಗಳಲ್ಲಿ ಹಿಡಿಯಲಾಗುತ್ತಿಲ್ಲವಲ್ಲ... ಹೀಗೆಲ್ಲ ಯೋಚಿಸಿ ಸುಮಿ ಸುಮ್ಮನಾಗುವಳು. ಆದರೆ ಮೌನದಲ್ಲೂ ಸದಾ ಶೈಲತ್ತೆಯ ಪ್ರೇಮದ ಆಲಾಪನೆ ಮೊರೆಯುತ್ತಿರುತ್ತದೆ, ಯಾಕೆ? ಕಾರವಾರದ ಅಸೀಮ ಸಮುದ್ರವೇ? ಸದಾ ಪ್ರತಿಧ್ವನಿಸುತ್ತಿರುವ ಶರಧಿಯ ಮೊರೆತವೇ? ಅಥವಾ ಕಾಲುದಾರಿಯ ಹುಡುಗನ ಸೀಳು ಕೂದಲಿನಿಂದ ಕಾಣುವ ಮೋಹಕ ಕಣ್ಣುಗಳೇ?

ಸೀಳು ಕೂದಲಿನಿಂದ ಕಾಣುವ ಮೋಹಕ ಕಣ್ಣುಗಳ ಹುಡುಗನನ್ನು ಮೀರಿದ, ಏನನ್ನೋ ಅಥವಾ ಯಾರನ್ನೋ ಹುಡುಕುತಿರುವೆ ಎಂದು ಸುಮಿಗೆ ಬೇಗನೇ ಅರ್ಥವಾಗಿತ್ತು. ಗ್ರೀನ್ ಸ್ಟ್ರೀಟ್ ದಾರಿಯಲ್ಲಿ ಮೂರನೇ ಬಾರಿ ಸೈಕಲ್ ಹುಡುಗ ಎದುರಾದಾಗ, ಆತನ ಕಣ್ಣುಗಳು ಸುಂದರವಿದ್ದರೂ, ಅವು ಅವಳೆಡೆಗೆ ಬೀರಿದ ದೃಷ್ಟಿಯಲ್ಲಿರುವ ಒರಟುತನ ಸುಮಿಗೆ ಇಷ್ಟವಾಗಲಿಲ್ಲ. ಕಾಣಲು ಸುಂದರವಿರುವ ಕಣ್ಣುಗಳ ದೃಷ್ಟಿಯೂ ಸುಂದರವೇ ಆಗಿರಬೇಕಿಲ್ಲ ಎಂಬುದು ಅವಳ ಅನುಭವಕ್ಕೆ ಬಂತು. ಬಹುಶಃ ಸುಮಿ ಹುಡುಗರ ಕಣ್ಣುಗಳಲ್ಲೂ ನಿಷ್ಕಳಂಕ ಕಡಲನ್ನೇ ಹುಡುಕುತ್ತಿದ್ದಳು. ತನ್ನ ಕನಸಿನ ಕಡಲ ಹುಡುಗ ಇವನಲ್ಲ ಇವನಲ್ಲ ಅನಿಸಿಬಿಟ್ಟಿತು ಅವಳಿಗೆ! ಆ ಸಂಜೆ ಅವಳನ್ನು ಮತ್ತೆ ಬೇಸರ ಮುತ್ತಿಕೊಂಡಿತು. ತನ್ನ ಮನಸ್ಸಿನ ಬೇಚೈನಿಯನ್ನು ಶೈಲತ್ತೆಯೊಡನೆ ಹಂಚಿಕೊಳ್ಳಬೇಕು. ಅವಳೇ ತನ್ನ ಭಾವನೆಗಳನ್ನು ಅರಿಯಬಲ್ಲವಳು. ಆದರೆ ಅಂಥ ಭಾವವನ್ನು ಅಕ್ಷರಗಳಲ್ಲಿ ಹಿಡಿದಿಡಲು ತನ್ನ ಬಳಿ ಸಾಧ್ಯವಾಗುತ್ತಿಲ್ಲವಲ್ಲ. ಸ್ವಚ್ಛಂದವಾಗಿ ಹಾರುವ ಚಿಟ್ಟೆಯನ್ನು ಹಿಡಿಯಲು ಹೋಗಿ ಬೆರಳಿಗೆ ಬಣ್ಣದ ಹುಡಿಯಷ್ಟೇ ಅಂಟಿಸಿಕೊಳ್ಳುವ ಹಾಗಿದೆ ತನ್ನ ಪ್ರಯತ್ನ! ಅರುಹದೇ ಅರಿಯುವ ಮನಸ್ಸೊಂದನ್ನು ತನ್ನ ಪಾಲಿಗೆ ಅನುಗ್ರಹಿಸು ಓ ಸಮುದ್ರರಾಜನೇ! ಕಡಲಂತೆ ಆಳವಿದ್ದರೂ ಕಡಲಂತೆ ನಿರಾಳವಾಗಿರುವ, ಕಡಲಂತೆ ಭೋರ್ಗರೆದರೂ ಕಡಲಂತೆ ಮೌನವಾಗಿರುವ, ಕಡಲಂತೆ ಅಗಾಧವಾಗಿದ್ದರೂ ಕಡಲಂತೆ ಆತ್ಮೀಯವಾಗುವ, ಕಡಲಂತೆ ಭಯವಾದರೂ ಕಡಲಂತೆ ಅಭಯ ನೀಡುವ ಹುಡುಗನನ್ನು ಪರಿಚಯಿಸು, ಓ ಕಾರವಾರವೇ!

2

## ಕಡಲ ತೀರದ ಹುಡುಗ

ಕಾರವಾರಕ್ಕೆ ಬಂದಾಗಿನಿಂದಲೂ ಒಂದಿನವೂ ಕಡಲಿಗೆ ಬರುವುದು ತಪ್ಪಲಿಲ್ಲ. ಸಮುದ್ರ ತೀರದಲ್ಲಿ ನಿತ್ಯವೂ ಉಸುಕಿನ ಬೇಲೆ ಮೇಲೆ ನಡೆಯುವಳು. ದಡದಲ್ಲಿ ನಿಂತು ಅಲೆಗಳೊಡನೆ ತುಂಟಾಟ ಆಡುವಳು. ನೀರಿನಲ್ಲಿ ತೆರೆಗಳೊಡನೆ ಅನುಸಂಧಾನಕ್ಕಿಳಿಯುವಳು. ಒದ್ದೆಯಾಗಬಾರದೆಂದು ಮೊಣಕಾಲವರೆಗೆ ಎತ್ತಿ ನೀರಿಗಿಳಿದರೂ ಧರಿಸಿದ ಡ್ರೆಸ್ಸು ಸೊಂಟದವರೆಗೂ ಹಸಿಯಾಗುವುದು ಮಾಮೂಲು. ಅದನ್ನು ಒಣಗಿಸಿಕೊಳ್ಳಲು ಅವಳು ಬೇಲೆ ಮೇಲೆ ದೂರ ನಡೆಯುವುದುಂಟು. ಇಂದು ಅವಳಿಗೆ ಪಕ್ಕದ ಗಾಳಿಮರಗಳ ಸಾಲುಗಳ ಒಳಗೆ ಅಲೆದಾಡುವ ಮನಸ್ಸಾಯಿತು. ದಡಬಿಟ್ಟು ತಂತಿಬೇಲಿ ದಾಟಿ ದಟ್ಟ ಗಾಳಿತೋಪಿನಲ್ಲಿ ಹೆಜ್ಜೆಹಾಕಿದಳು. ಸಾಗರದಿಂದ ಬೀಸುವ ಗಾಳಿಗೆ ಅದುರುತ್ತಿದ್ದ ಗಾಳಿಮರದ ಟಿಸಿಲುಗಳು ಸುಂಯ್ಯ ಎನ್ನುವ ಸಂಗೀತವನ್ನು ನುಡಿಸುತ್ತಿದ್ದವು. ಸೂಜಿಯಂಥ ಎಲೆಗಳಿಂದ ಸೋಸಿದ ಸಂಜೆಯ ಎಳೆಬಿಸಿಲು ನೆಲಕ್ಕೆ ಚಿತ್ತಾರ ಬರೆದಿತ್ತು. ಸುಮಿ ಗಾಳಿಮರಗಳನ್ನು ಸುತ್ತಿಬಳಸಿ ಅಡ್ಡಾಡಿದಳು. ಸ್ವಲ್ಪ ಒಳಬದಿಯಲ್ಲಿ ಕೆಲವು ಪ್ರೇಮಿಗಳು ಸಂಜೆಯ ಸೊಬಗು ಮತ್ತು ಪ್ರೇಮದ ನಶೆಯಲ್ಲಿ ಮೈಮರೆತಿದ್ದರು. ಸನಿಹಕ್ಕೆ ಹೋಗಿ ಅವರಾಡುವ ಮಾತುಗಳನ್ನು ಆಲಿಸಿಬೇಕು ಅನಿಸಿತು, ಸುಮಿಗೆ. ಮರುಕ್ಷಣವೇ ಶ್ಶೀ ಎಂಥ ಹುಚ್ಚು ಆಸೆ ಅಂದುಕೊಂಡಳು. ಆದರೆ ಅದೇಕೆ ಹುಚ್ಚುತನ ಆಗಬೇಕು? ಪ್ರೇಮವೆನ್ನುವುದು ಎಷ್ಟು ಖಾಸಗಿಯೋ ಅಷ್ಟೇ ಸಾರ್ವಜನಿಕ ಕೂಡ ಆಗಬೇಕಲ್ಲವೇ? ಅಮರ ಮಧುರ ಪ್ರೇಮ ಕತೆಗಳು ಸಂಭವಿಸುವುದು ಪ್ರೇಮಿಗಳ ನಡುವೆಯಾದರೂ ಆ ಕತೆಗಳನ್ನು, ಅಂಥ ಪ್ರೇಮಿಗಳನ್ನು ನಾವು ಆರಾಧಿಸುವುದಿಲ್ಲವೇ? ಮರದ ಬುಡಗಳಿಗೆ ಒರಗಿರುವ ಈ ಎಲ್ಲಾ ಗಂಡು–ಹೆಣ್ಣುಗಳನ್ನು ಬೆಸೆದಿರುವ ಭಾವತಂತು ಒಂದೇ, ಅದೇ ಪ್ರೇಮವೇ ಅಲ್ಲವೇ? ಅಂದಮೇಲೆ ಪ್ರೇಮ ಎಷ್ಟು ಖಾಸಗಿ ಮತ್ತು ಎಷ್ಟು ಸಾರ್ವಜನಿಕ? ಪ್ರೇಮ ಸಾರ್ವಕಾಲಿಕ ಸತ್ಯವಾದರೂ ಸಮಾಜವು ಪ್ರೇಮಕ್ಕೆ ಪರದೆಯನ್ನೇಕೆ ಎಳೆದುಕೊಂಡಿದೆ? ಶೈಲತ್ತೆಯಂಥ ಶೈಲತ್ತೆಯ ಪರಿಶುದ್ಧ ಪ್ರೇಮವನ್ನು ಸಮಾಜ ಯಾಕೆ ಮನ್ನಿಸಲಿಲ್ಲ? ... ಅಯ್ಯೋ ಮತ್ತೆ ಶೈಲತ್ತೆ! ಪ್ರೇಮದ ಪ್ರತಿ ಫ್ರೇಮಿನಲ್ಲೂ ನನಗೆ ಶೈಲತ್ತೆಯ ಅಧೂರಾ ಪ್ರೇಮವು ಕಾಡುವುದೇಕೆ? ಶ್ಶಿ!

ಆಸೆಯೇನೋ ಇತ್ತು, ಆದರೆ ಅದು ಸೌಜನ್ಯವಲ್ಲ ಅನಿಸಿ ಸುಮಿ ಗಾಳಿಮರ ಸಾಲುಗಳ ನಡುವೆ ತುಂಬಾ ಒಳಭಾಗಕ್ಕೆ ಹೋಗದೇ, ದಂಡೆಗೆ ಒತ್ತಿನಿಂತ ಮರಗಳ ನೆರಳಲ್ಲೇ ನಡೆದಳು. ಕೆಂಪಾಗುತ್ತಿರುವ ಬಾನಿಗೆ, ಆಕಾಶ ಸಮುದ್ರ ಭೂಮಿಯನ್ನು ಆವರಿಸಿಕೊಳ್ಳುವ ಅವಸರವಿತ್ತು. ಸಮುದ್ರದಲ್ಲಿಯ ದ್ವೀಪಗಳಿಗೆ ರಾತ್ರಿಯಿಡೀ ಕತ್ತಲನ್ನು ಮೆತ್ತಿಕೊಂಡು ಭಾರವಾದ ದಿಗಂತವನ್ನು ಹೊರುವ ದುಗುಡವಿತ್ತು. ಸಾಗರದ ಗಾಳಿಗೆ ಕತ್ತಲಾಗುವುದರೊಳಗೆ ಭೂಮಿಗೆ ತಲುಪಿ ಮರಗಿಡಗಳೊಳಗೆ ಅವಿತು ದಣಿವಾರಿಸಿಕೊಳ್ಳುವ ಧಾವಂತವಿತ್ತು. ಇವೆಲ್ಲವಕ್ಕೂ ಸಾಕ್ಷಿಯಾಗಿ ಕಡಲ ದಂಡೆಯುದ್ದಕ್ಕೂ ನಡೆಯುತ್ತಿದ್ದ ಸುಮಿ ಕಾಳಿ ಕಡಲು ಸೇರುವ ತುದಿಗೆ ತಲುಪಿದ್ದಳು. ಅವಳೆಂದೂ ಸಮುದ್ರ ತೀರದ ದಾರಿಯಲ್ಲಿ ಕಾಳಿನದಿ ಸಂಗಮಕ್ಕೆ ಬಂದಿರಲಿಲ್ಲ. ಆ ಅದ್ಭುತ ದೃಶ್ಯ ಧುತ್ತೆಂದು ಎದುರಾಗಿ ಮೈನವಿರೇಳಿಸಿತು. ಕಾಡು ಕಣಿವೆ ಸುತ್ತಿ ಸುಳಿದು, ಗುಡ್ಡ ಬೆಟ್ಟ ಹತ್ತಿ ಇಳಿದು ಕಡಲೊಳಗೆ ಸೇರುವ ಕಾಳಿ ಗಜಗಮನೆಯಾಗಿದ್ದಳು. ತುಳುಕಾಡುವ ಕಿರು ತೆರೆಗಳು, ನೀರಿಗೆ ಗೀರೆಳೆದು ಹಾರುವ ಬೆಳ್ಳಕ್ಕಿಗಳು, ನೀರಿನಿಂದ ನೆಗೆಯುವ ಮೀನುಗಳನ್ನು ನೋಡುತ್ತಾ ಮುಂದೆ ಮುಂದೆ ಹೆಜ್ಜೆಯಿಡುತ್ತಿದ್ದವಳಿಗೆ ತಾನು ತುಂಬಾ ದೂರ, ನಿರ್ಜನ ತಾಣಕ್ಕೆ ಬಂದಿರುವುದು ತಡವಾಗಿ ಅರಿವಾಯಿತು. ಸಣ್ಣ ಭಯವೊಂದು ಅವಳನ್ನು ಆವರಿಸಿ, ಪೂರ್ತಿ ಕತ್ತಲಾಗುವ ಮುನ್ನ ಮರಳಬೇಕು ಎಂದು ಇನ್ನೇನು ಹಿಂತಿರುಗುವವಳಿದ್ದಳು. ತುಸು ದೂರದಲ್ಲಿ ಪಾತಿ ದೋಣಿಯನ್ನು ಸಜ್ಜುಗೊಳಿಸುತ್ತಿದ್ದ ಹುಡುಗನ ಬಿಂಬವೊಂದು ಅರಿವಿಲ್ಲದೇ ಅವಳನ್ನು ಇನ್ನಷ್ಟು ಮುಂದಕ್ಕೆ ಸೆಳೆದೊಯ್ದಿತು!

ಬರೀ ಒಂದು ಬರ್ಮುಡಾದಲ್ಲಿದ್ದ ಆ ಹುಡುಗ ಪಾತಿದೋಣಿಗೆ ಏನೋ ಎಣ್ಣೆ ಹಚ್ಚುತ್ತಾ ಆ ಸಂಜೆಯ ಬಾಡಿದ ಬೆಳಕನ್ನು ಅಲುಗಾಡಿಸುತ್ತಿದ್ದ. ಸುತ್ತಲೂ ಗೇರೆಣ್ಣೆಯ ಘಾಟು ಹರಡಿಕೊಂಡಿತ್ತು. ಸುಮಿಗೆ ಆ ಹುಡುಗ ದೋಣಿ ನದಿಗಿಳಿಸುವುದನ್ನು ನೋಡುವ ಆಸೆಯಾಯಿತು. ಆ ಹುಡುಗ ಪೂರ್ತಿ ತನ್ನ ಕೆಲಸದಲ್ಲಿ ಮಗ್ನನಾಗಿದ್ದ. ವಯಸ್ಸಿಗೆ ಮೀರಿದ ಗಾಂಭೀರ್ಯದಲ್ಲಿದ್ದ. ಸುಮಿ ತೀರಾ ಸನಿಹ ಬಂದಾಗ ಒಮ್ಮೆ ತಲೆ ಎತ್ತಿದ, ಅಷ್ಟೇ! ಒಂದೇ ಒಂದು ಕ್ಷಣ ಇಬ್ಬರ ದೃಷ್ಟಿ ಬೆರೆತದ್ದು. ಅವನ ಕಣ್ಣುಗಳು ಸೂರ್ಯನ ಬೆಳಕನ್ನು ಕುಡಿದಷ್ಟು ಪ್ರಖರವಾಗಿದ್ದವು. ಸುಮಿಗೆ ಎದುರಿನ ದೇವಭಾಗದಲ್ಲಿ ಸಿಡಿಲ ಚೂರೊಂದು ಬಿದ್ದಂತೆ ಭಾಸವಾಯಿತು.

(ಸಶೇಷ)